

# ಅಧ್ಯಾಯ ೧೫

# ನಮ್ಮ ನೆಲದ/ಸ್ಥಳೀಯ ನೃತ್ಯಗಳು

ನಮ್ಮ ನೃತ್ಯ ಪ್ರಯಾಣವನ್ನು ಪ್ರಾರಂಭಿಸೋಣ! ನಿಮ್ಮ ನೃತ್ಯದ ಗಂಟೆಗಳನ್ನು ಧರಿಸಲು ಮತ್ತು ನೃತ್ಯದ ಜಗತ್ತಿನಲ್ಲಿ ಧುಮುಕಲು ಸಿದ್ಧರಾಗಿ!

## ನಮ್ಮ ನೆಲದ ನೃತ್ಯಗಳು: ಸ್ಥಳೀಯ ಲಯಗಳು ಮತ್ತು ಚಲನೆಗಳನ್ನು ಅನ್ವೇಷಿಸುವುದು

ಈ ಅಧ್ಯಾಯವು ನಮ್ಮ ದೇಶವನ್ನು ವರ್ಣರಂಜಿತ ಮತ್ತು ಉತ್ಸಾಹಭರಿತವಾಗಿಸುವ ಶ್ರೇಷ್ಠ ನೃತ್ಯ ಪ್ರಕಾರಗಳನ್ನು ಕಂಡುಹಿಡಿಯುವ ಬಗ್ಗೆಯಿದೆ.

ನಿಮ್ಮ ಸುತ್ತಮುತ್ತಲಿನಲ್ಲಿ ಇರುವ ನೃತ್ಯ ಪ್ರಕಾರಗಳನ್ನು ಹತ್ತಿರದಿಂದ ನೋಡೋಣ.

ಈ ಚಟುವಟಿಕೆಯಲ್ಲಿ, ನಿಮ್ಮ ಪ್ರದೇಶಕ್ಕೆ ಸೇರಿದ ನೃತ್ಯಗಳನ್ನು ನೀವು ಕಂಡುಕೊಳ್ಳಲಿದ್ದೀರಿ. ಶ್ರೀಮಂತ ಸಾಂಪ್ರದಾಯಿಕ ಲೋಕ ನೃತ್ಯಗಳಿಂದ ಹಿಡಿದು ಸ್ಥಳೀಯ ಆಚರಣೆಗಳ ಶಕ್ತಿಯುತ ತಾಳಗಳವರೆಗೆ, ಈ ನೃತ್ಯಗಳು ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿವೆ.

ನಿಮ್ಮ ಪ್ರದೇಶದ ಚೈತನ್ಯವನ್ನು ಪ್ರದರ್ಶಿಸುವ ನೃತ್ಯ ಪ್ರಕಾರಗಳನ್ನು ಕಂಡುಹಿಡಿಯಲು ಸಿದ್ಧರಾಗಿ, ಮತ್ತು ನೃತ್ಯ ಲೋಕವನ್ನು ಲಯ ಮತ್ತು ಸಂತೋಷದಿಂದ ಜೀವಂತವಾಗಿರಿಸಿ!

0680CH15

## ಚಟುವಟಿಕೆ ೧: ಪ್ರಾದೇಶಿಕ ನೃತ್ಯಗಳನ್ನು ಅನ್ವೇಷಿಸುವುದು

ನಿಮ್ಮ ಪ್ರದೇಶದ ವಿವಿಧ ಪ್ರಾದೇಶಿಕ ನೃತ್ಯಗಳ ಹೆಸರುಗಳನ್ನು ಪಟ್ಟಿ ಮಾಡಿ. ಹಾಗೂ ಅವುಗಳನ್ನು ನಿಮ್ಮ ಸ್ನೇಹಿತರು, ಪೋಷಕರು ಮತ್ತು ಶಿಕ್ಷಕರೊಂದಿಗೆ ಚರ್ಚಿಸಿ.

ಯಾವುದಾದರೊಂದು ಪ್ರಾದೇಶಿಕ ನೃತ್ಯವನ್ನು ಆರಿಸಿ ಮತ್ತು ಸ್ಥಳೀಯ ಕಲಾವಿದರನ್ನು ಭೇಟಿ ಮಾಡಲು ಕ್ಷೇತ್ರ ಪ್ರವಾಸವನ್ನು ನಡೆಸಿ. ನೀವು ಅವರ ವೀಡಿಯೊಗಳನ್ನು ಸಹ ವೀಕ್ಷಿಸಬಹುದು.

ಸಾಧ್ಯವಾದರೆ, ಅವರೊಂದಿಗೆ ಒಂದು ಸಣ್ಣ ಕಾರ್ಯಾಗಾರವನ್ನು ನಡೆಸಿ, ಮತ್ತು ಸ್ಥಳೀಯ ನೃತ್ಯ ಪ್ರಕಾರದ ಹಿಂದಿನ ಆಲೋಚನೆಗಳು ಮತ್ತು ಉದ್ದೇಶವನ್ನು ಕಂಡುಹಿಡಿಯಿರಿ.

ಭಂಗಿಗಳು, ಸನ್ನೆಗಳು ಮತ್ತು ಅದರ ಆಕರ್ಷಕ ಚಲನೆಗಳನ್ನು ಕಲಿಯಲು ಪ್ರಯತ್ನಿಸಿ.

ಈ ರೀತಿಯಾಗಿ, ನೀವು ನಿಮ್ಮ ಸ್ವಂತ ಪ್ರಾದೇಶಿಕ ನೃತ್ಯ ಪ್ರಕಾರಗಳ ರೋಮಾಂಚಕಾರಿ ಪ್ರಯಾಣವನ್ನು ಪ್ರಾರಂಬಿಸಬಹುದು.

© NCERT not to be republished



ಗುಜರಾತಿನ ಗರ್ಬಾ ನೃತ್ಯ



ತಬಲಾ



ಡೋಲ್



ದಾಂಡಿಯಾ ಕಡ್ಡಿಗಳು

ಸಕಾರಾತ್ಮಕ ಶಕ್ತಿಯಿಂದ ತುಂಬಿರುವ ಅದ್ಭುತವಾದ ಸುಳಿವಿಗಳು, ಸುಂದರವಾದ ತಿರುವುಗಳು, ಭವ್ಯವಾದ ಚಲನೆಗಳು, ಆಕರ್ಷಕವಾದ ಹೆಜ್ಜೆಗಳು, ವರ್ಣರಂಜಿತ ವೇಷಭೂಷಣಗಳು ಮತ್ತು ನೃತ್ಯದ ಭಾವನಾತ್ಮಕ/ವಿರೇಚಿತ ಭಾವನೆಗಳನ್ನು ಗಮನಿಸಿ.

**ಉದಾಹರಣೆಗಳು**

ಕ್ಷೇತ್ರ ಪ್ರವಾಸದ ಸಮಯದಲ್ಲಿ ನೃತ್ಯ ಪ್ರಕಾರದ ಅವಲೋಕನಗಳನ್ನು ದಾಖಲಿಸುವ ವಿಧಾನ.

### ಗುಜರಾತಿನ ಗರ್ಬಾ ನೃತ್ಯ

**ಎ. ಪರಿಚಯ**

ದುರ್ಗಾ ದೇವಿಯನ್ನು ಪೂಜಿಸುವ ನವರಾತ್ರಿ ಹಬ್ಬದ ಸಮಯದಲ್ಲಿ ಈ ನೃತ್ಯ ಪ್ರಕಾರವನ್ನು ಪ್ರದರ್ಶಿಸಲಾಗುತ್ತದೆ. ಈ ನೃತ್ಯವು ಸಮುದಾಯ ಮನೋಭಾವ ಮತ್ತು ಒಗ್ಗಟ್ಟಿನ ಪ್ರದರ್ಶನದ ಜೊತೆಗೆ ಸಂಸ್ಕೃತಿ ಮತ್ತು ಸಂಪ್ರದಾಯದ ಆಚರಣೆಯಾಗಿದೆ.

**ಬಿ. ನೃತ್ಯದ ಗುಣಲಕ್ಷಣಗಳು**

- ರೋಮಾಂಚನಕಾರಿ ಮತ್ತು ಚೈತನ್ಯಭರಿತವಾದ ಚಲನೆಗಳು.
- ಲಯಬದ್ಧ ಚಪ್ಪಾಳೆ.
- ಕೇಂದ್ರೀಕೃತ ವೃತ್ತಗಳಲ್ಲಿ ಚಲಿಸುವ ನೃತ್ಯಗಾರರಿಂದ ರಚಿಸಲಾದ ವೃತ್ತಾಕಾರದ ಮಾದರಿಗಳು.

**ಸಿ. ಹಿಮ್ಮೇಳ**

- ಸಾಂಪ್ರದಾಯಿಕ ಜಾನಪದ ಸಂಗೀತ.
- ಈ ರೀತಿಯ ಉಪಕರಣಗಳು ಧೋಲ್ (ಡ್ರಮ್), ತಬಲಾ ಮತ್ತು ದಾಂಡಿಯಾ ಕೋಲುಗಳು/ಸ್ಟಿಕ್ಸ್.

**ಡಿ. ವೇಷಭೂಷಣಗಳು**

- ಮಹಿಳೆಯರಿಗಾಗಿ ಚನಿಯಾ ಚೋಲಿಸ್ (ಗಾಗ್ರಾ) .
- ಪುರುಷರಿಗಾಗಿ ಕೆದಿಯು-ಕಾಫ್ನಿ (ಒಂದು ರೀತಿಯ ಧೋತಿ ಮತ್ತು ಕುರ್ತಾ).

## ಇತರ ನೃತ್ಯ ಪ್ರಕಾರಗಳನ್ನು ಅನ್ವೇಷಿಸುವುದು

ಇಲ್ಲಿ, ನೀವು ನಮ್ಮ ದೇಶದ ಇತರ ಪ್ರದೇಶಗಳ ಸ್ಥಳೀಯ ನೃತ್ಯ ಪ್ರಕಾರಗಳನ್ನು ಅನ್ವೇಷಿಸಲಿದ್ದೀರಿ.

ಈ ನೃತ್ಯ ಪ್ರಯಾಣದಲ್ಲಿ, ಒಂದೇ ಸ್ಥಳೀಯ ನೃತ್ಯ ಪ್ರಕಾರವನ್ನು ಕಲಿಯುವ ಬದಲು, ನೀವು ಇತರ ನೃತ್ಯ ಪ್ರಕಾರಗಳನ್ನು ಸಹ ಅನ್ವೇಷಿಸುತ್ತೀರಿ.

### ಚಟುವಟಿಕೆ ೨: ಇತರ ನೃತ್ಯ ಪ್ರಕಾರಗಳನ್ನು ಅನ್ವೇಷಿಸುವುದು

ಇತರ ಪ್ರಾದೇಶಿಕ ನೃತ್ಯ ಪ್ರಕಾರಗಳ ವೀಡಿಯೊಗಳನ್ನು ವೀಕ್ಷಿಸಿ.

ಬನ್ನಿ... ಒಟ್ಟಿಗೆ ಕುಳಿತು ಇತರ ಪ್ರದೇಶಗಳ ನೃತ್ಯದ ಬಗ್ಗೆ ಫಲಪ್ರದ/ಅರ್ಥಪೂರ್ಣವಾದ ಚರ್ಚೆಯನ್ನು ನಡೆಸಿ.

© NCERT not to be republished

| ರಾಜ್ಯಗಳು | ನೃತ್ಯದ ಹೆಸರು | ಹಿಮ್ಮೇಳ ವಾದ್ಯಗಳು | ವೇಷಭೂಷಣಗಳು | ನೃತ್ಯ ಮಾಡುವ ಹಬ್ಬದ ಸಂಧರ್ಭ |
|---|---|---|---|---|
| ಕೇರಳ | ತಿರುವಥಿರ ಕಾಳಿ: ಮಹಿಳೆಯರಿಂದ ಪ್ರದರ್ಶಿಸಲ್ಪಡುತ್ತದೆ. | ಜಾನಪದ ಗೀತೆಯ ಮೂಲಕ ಚಪ್ಪಾಳೆಯೊಂದಿಗಿನ ಆಕರ್ಷಕ ಲಯಬದ್ದವಾದ ನೃತ್ಯ. | ಸರಳ ಕೇರಳ ಶೈಲಿಯ ವೇಷಭೂಷಣ ಮುಂಡ್(ಪಂಚೆ) ಮತ್ತು ವೆಸ್ತಿ, ಜೊತೆಗೆ ಸಾಂಪ್ರದಾಯಿಕ ಕೇರಳ ಆಭರಣಗಳು. | ತಿರುವಥಿರ, ಶಿವರಾತ್ರಿ, ಓಣಂ ಮತ್ತು ಇತರ ಕೆಲವು ಹಬ್ಬಗಳ ಸಂದರ್ಭದಲ್ಲಿ. |
| ಒಡಿಶಾ | ಸೈಲಾ: ಬುಡಕಟ್ಟು ಸಮುದಾಯದಿಂದ ಪ್ರದರ್ಶಿಸಲ್ಪಡುತ್ತದೆ. | ಧೋಲ್ (ಬ್ಯಾರೆಲ್ ಆಕಾರದ ಡ್ರಮ್), ನಗಾರ/ನಗಾಡ್ (ಕೆಟಲ್ ಡ್ರಮ್) ಮತ್ತು ಕೊಳಲು. | ವರ್ಣರಂಜಿತ ಸೀರೆಗಳು ಮತ್ತು ಧೋತಿಗಳು, ಬುಡಕಟ್ಟು ಆಭರಣ ಮಣಿಗಳು, ಚಿಪ್ಪುಗಳು ಮತ್ತು ಲೋಹದ ಆಭರಣಗಳು. | ಕೃಷಿ ಮಾಡುವ ಋತುವಿನ ಆರಂಭದಲ್ಲಿ ಚೈತ್ರ ಪರ್ವ ಹಬ್ಬದ ಆಚರಣೆಯ ಸಂದರ್ಭದಲ್ಲಿ. |
| ಕಾಶ್ಮೀರ | ರೌಫ್: ಒಂದು ಗುಂಪಿನಲ್ಲಿ ಮಹಿಳೆಯರಿಂದ ಪ್ರದರ್ಶಿಸಲ್ಪಡುತ್ತದೆ. | ತುಂಬಕ್ನಾರಿ (ಒಂದು ಸಣ್ಣ ಕೆಟಲ್ ಡ್ರಮ್), ರಬಾಬ್ (ತಂತಿಯ ವಾದ್ಯ) ಮತ್ತು ಹಾರ್ಮೋನಿಯಂ. | ಕಾಶ್ಮೀರಿ ವೇಷಭೂಷಣ ಫೆರಾನ್ (ಸಡಿಲವಾದ, ಉದ್ದವಾದ ನಿಲುವಂಗಿ) ವರ್ಣರಂಜಿತವಾಗಿ ಕಸೂತಿ ಮಾಡಿದ ಉಡುಗೆ, ಆಭರಣಗಳು: ಕಿವಿಯೋಲೆಗಳು, ಸರಗಳು ಮತ್ತು ಬಳೆಗಳು. | ಈದ್, ಬೈಸಾಖಿ ಮತ್ತು ನವ್ರೋಜ್, ಅಂತೆಯೆ ಜೊತೆಗೆ ಮದುವೆಗಳು, ಸುಗ್ಗಿಯ ಆಚರಣೆಗಳು ಮತ್ತು ಇತರ ಸಾಮಾಜಿಕ ಕೂಟಗಳ ಸಮಯದಲ್ಲಿ ಪ್ರದರ್ಶನ ನೀಡಲಾಗುತ್ತದೆ. |

ನಮ್ಮ ದೇಶದ ರಾಜ್ಯಗಳನ್ನು ಆಯಾ ನೃತ್ಯ ಪ್ರಕಾರಗಳೊಂದಿಗೆ ಪಟ್ಟಿ ಮಾಡಿ. ಕೆಲವು ರಾಜ್ಯಗಳನ್ನು ಇಲ್ಲಿ ಉದಾಹರಣೆಯಾಗಿ ತೋರಿಸಲಾಗಿದೆ.

ವಿವಿಧ ಪ್ರದೇಶಗಳ ವಿವಿಧ ನೃತ್ಯ ಪ್ರಕಾರಗಳ ಮಾಹಿತಿಯನ್ನು ನೀವು ಕೋಷ್ಟಕ ರೂಪದಲ್ಲಿ ಜೋಡಿಸಬಹುದು. ಅದ್ಭುತ! ಒಳ್ಳೆಯದು. ನಮ್ಮ ನೃತ್ಯ ಪ್ರಯಾಣದ ಮುಂದಿನ ಹಂತಕ್ಕೆ ಹೋಗೋಣ

© NCERT not to be republished

**ಪ್ರಾದೇಶಿಕ ನೃತ್ಯ ಪ್ರಕಾರಗಳ ಹೋಲಿಕೆ**

ನಿಮ್ಮ ನೃತ್ಯ ಪ್ರಯಾಣದಲ್ಲಿ, ನೀವು ಅನೇಕ ಸ್ಥಳೀಯ ನೃತ್ಯ ಪ್ರಕಾರಗಳನ್ನು ನೋಡಿರಬಹುದು. ಉನ್ನತ ಮಟ್ಟಕ್ಕೆ ಹೋಗಿ, ನಿಮ್ಮ ಪ್ರದೇಶದ ಸ್ಥಳೀಯ ನೃತ್ಯ ಪ್ರಕಾರಗಳನ್ನು ಇತರ ಪ್ರದೇಶಗಳೊಂದಿಗೆ ಹೋಲಿಸಿ ಮತ್ತು ವ್ಯತಿರಿಕ್ತಗೊಳಿಸಿ.

| ರಾಜ್ಯಗಳು | ನೃತ್ಯದ ಹೆಸರು | ಹಿಮ್ಮೇಳ ವಾದ್ಯಗಳು | ವೇಷಭೂಷಣಗಳು | ನೃತ್ಯ ಮಾಡುವ ಹಬ್ಬದ ಸಂಧರ್ಭ |
|---|---|---|---|---|
| | | | | |
| | | | | |
| | | | | |

© NCERT not to be republished

## ಚಟುವಟಿಕೆ ೩: ಪ್ರಾದೇಶಿಕ ನೃತ್ಯ ಪ್ರಕಾರಗಳ ಹೋಲಿಕೆ

ನೀವು ರಾಜಸ್ಥಾನಕ್ಕೆ ಸೇರಿದವರು ಎಂದು ಭಾವಿಸೋಣ ಮತ್ತು ಸ್ಥಳೀಯ ಕಾಲ್ಬೆಲಿಯಾ ನೃತ್ಯ ಪ್ರಕಾರವನ್ನು ಆಯ್ಕೆ ಮಾಡಿ. ಈಗ, ಇದನ್ನು ಮೇಘಾಲಯದ ನೊಂಗ್ಕ್ರೆಮ್ ನೃತ್ಯ ಎಂಬ ಮತ್ತೊಂದು ಸ್ಥಳೀಯ ನೃತ್ಯದೊಂದಿಗೆ ಹೋಲಿಸಿ ನೋಡಿ.

### ಕೆಳಗೆ ತೋರಿಸಿರುವಂತೆ ತುಲನಾತ್ಮಕ ಚಾರ್ಟ್ ರಚಿಸಿ -

| ನೃತ್ಯ ಪ್ರಕಾರ | ಕಲ್ಬೆಲಿಯಾ | ನೊಂಗ್ಕ್ರೆಮ್ |
|---|---|---|
| |  |  |
| **ರಾಜ್ಯ** | ರಾಜಸ್ಥಾನ | ಮೇಘಾಲಯ |
| **ವೇಷಭೂಷಣ** | ಮಹಿಳೆಯರು ದೇಹದ ಮೇಲ್ಭಾಗದ ಬಟ್ಟೆಯನ್ನು (ಅಂಗ್ರಾಖಿ), ತಲೆ ಬಟ್ಟೆ (ಒಡನಿ) ಮತ್ತು ದೇಹದ ಕೆಳಭಾಗದ ಉಡುಪು (ಲೆಹೆಂಗಾ) ಸಣ್ಣ ಕನ್ನಡಿಗಳಿಂದ ಕಸೂತಿ ಮಾಡಲಾಗಿರುವ ಉಡುಪನ್ನು ತೊಡುತ್ತಾರೆ | ಮಹಿಳೆಯರು ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿದರೆ, ಪುರುಷರು ಸಾಮಾನ್ಯವಾಗಿ ಕತ್ತಿಗಳು ಮತ್ತು ಬಿಳಿ ಯಾಕ್ ಕೂದಲನ್ನು ಹಿಡಿದುಕೊಂಡು ರೋಮಾಂಚಕ ಬಣ್ಣಗಳಿಂದ ಅಲಂಕರಿಸಲ್ಪಡುತ್ತಾರೆ. |
| **ಉದ್ದೇಶ** | ಆಚರಣೆಗಳೊಂದಿಗೆ ಸಂಬಂಧ ಹೊಂದಿದೆ, ಹೆಚ್ಚಾಗಿ ಪೌರಾಣಿಕ ಕಥೆಗಳನ್ನು ಚಿತ್ರಿಸುತ್ತದೆ. ಹೋಳಿ ಹಬ್ಬದ ಸಮಯದಲ್ಲಿ ವಿಶೇಷ ನೃತ್ಯಗಳನ್ನು ನಡೆಸಲಾಗುತ್ತದೆ. | ಜನರ ಸಮೃದ್ಧ ಫಸಲು ಮತ್ತು ಸಮೃದ್ಧಿಗಾಗಿ ಶಕ್ತಿಶಾಲಿ ದೇವಿಯನ್ನು ಮೆಚ್ಚಿಸಲು ಶರತ್ಕಾಲದಲ್ಲಿ ಆಚರಿಸಲಾಗುತ್ತದೆ.. |
| **ಪ್ರದರ್ಶಕರು** | ಮಹಿಳೆಯರು ನೃತ್ಯ ಮಾಡುತ್ತಾರೆ ಮತ್ತು ಪುರುಷರಿಂದ ಹಾಡುತ್ತಾರೆ. | ಪುರುಷರು ಮತ್ತು ಮಹಿಳೆಯರು ಇಬ್ಬರೂ. |
| **ಹಿಮ್ಮೇಳ ವಾದ್ಯಗಳು** | ಸಾಂಪ್ರದಾಯಿಕ ಜಾನಪದ ಸಂಗೀತವಾದ್ಯ ಮತ್ತು ಮರದ ವಾದ್ಯವಾದ ಪುಂಗಿ, ತಾಳವಾದ್ಯಗಳು ಡಫ್ಲಿ, ಬೀನ್ ಮತ್ತು ಖಂಜಿರಾ. | ಸಾಂಪ್ರದಾಯಿಕ ಸಂಗೀತದೊಂದಿಗೆ ಡ್ರಮ್ ಸೇರಿದಂತೆ ಜೊತೆಗೆ ಗಾಳಿ ವಾದ್ಯವಾದ ತಂಗ್ಮುರಿ. |

© NCERT not to be republished

| ನೃತ್ಯ ಪ್ರಕಾರ | | |
|---|---|---|
| ರಾಜ್ಯ | | |
| ವೇಷಭೂಷಣ | | |
| ಉದ್ದೇಶ | | |
| ಪ್ರದರ್ಶಕರು | | |
| ಹಿಮ್ಮೇಳ ವಾದ್ಯಗಳು | | |

© NCERT not to be republished

## ಚಟುವಟಿಕೆ ೪: ಪ್ರಾದೇಶಿಕ ನೃತ್ಯ ಪ್ರಕಾರದ ಮೇಲೆ ಯೋಜನೆ(Project)

ಸ್ಥಳೀಯ ನೃತ್ಯ ಪ್ರಕಾರಗಳನ್ನು ಅಧ್ಯಯನ ಮಾಡಲು ಕ್ಷೇತ್ರ ಪ್ರವಾಸವನ್ನು ನಡೆಸಿದ ಚಟುವಟಿಕೆ ೧ ನಿಮಗೆ ನೆನಪಿದೆಯೇ?

ಸಂಬಂಧಿತ ಚಿತ್ರಗಳನ್ನು ಚಿತ್ರಿಸುವ ಅಥವಾ ಅಂಟಿಸುವ ಮೂಲಕ ಸ್ಥಳೀಯ ನೃತ್ಯ ಪ್ರಕಾರದ ಮೇಲೆ ಯೋಜನೆಯನ್ನು ತಯಾರಿಸಿ. ಒಂದು ಜಾನಪದ ಗೀತೆಯನ್ನು (ನೃತ್ಯಕ್ಕೆ ಸಂಬಂಧಿಸಿದ) ಆಯ್ಕೆ ಮಾಡಿ ಮತ್ತು ಅದರ ಟಿಪ್ಪಣಿ ಮಾಡಿ. ನಿರ್ದಿಷ್ಟ ನೃತ್ಯ ಪ್ರಕಾರಕ್ಕೆ ಸೇರಿದ, ಕೈಯಿಂದ ಮಾಡಿದ ಕರಕುಶಲ ಮಾದರಿ ಆಭರಣಗಳನ್ನು ಅಂಟಿಸಿ.

ಅಂತಿಮವಾಗಿ, ನಿಮ್ಮ ಯೋಜನೆಯನ್ನು ಎಲ್ಲಾ ಶಿಕ್ಷಕರು ಮತ್ತು ಸ್ನೇಹಿತರ ಮುಂದೆ ಪ್ರಸ್ತುತಪಡಿಸಿ.



## ಚಟುವಟಿಕೆ ೫: ಪ್ರಸಿದ್ಧ ನೃತ್ಯಗಾರರ ಬಗ್ಗೆ ಟಿಪ್ಪಣಿಗಳು

ನಿಮ್ಮ ಆಯ್ಕೆಯ ಪ್ರಸಿದ್ಧ ಆಧುನಿಕ ಭಾರತೀಯ ನೃತ್ಯಗಾರರ ಬಗ್ಗೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ. ಸೃಜನಾತ್ಮಕವಾಗಿ ಬರೆಯಿರಿ ಮತ್ತು ಚಿತ್ರಗಳನ್ನು ಅಂಟಿಸಿ. ಈ ಚಟುವಟಿಕೆಯ ಉದ್ದಕ್ಕೂ, ಪ್ರಸಿದ್ಧ ನರ್ತಕರ ಚಲನೆಗಳು, ಭಂಗಿಗಳು ಮತ್ತು ಸನ್ನೆಗಳನ್ನು ಅನುಕರಿಸಲು ಪ್ರಯತ್ನಿಸಿ.

© NCERT not to be republished